68

# ಸಮಾಧಿ

# (27:57-66)

ಅರಿಮಥಾಯದ ಯೋಸೇಫನು ಪಿಲಾತನಿಂದ ಯೇಸುವಿನ ದೇಹವನ್ನು ಸಮಾಧಿಮಾಡಲು ಅಪ್ಪಣೆಯನ್ನು ಪಡೆದ ನಂತರ, ಅವರನ್ನು ತನ್ನ ಸ್ವಂತ ಸಮಾಧಿಯಲ್ಲಿ ಇರಿಸಿದನು (27:57-61). ಮರುದಿನ, ಸಬ್ಬತ್ ದಿನವಾಗಿದ್ದದರಿಂದ, ಪಿಲಾತನು ಯೆಹೂದಿ ನಾಯಕರಿಗೆ ಸಮಾಧಿಯನ್ನು ಕಾಯುವದಕ್ಕೆ ಅಪ್ಪಣೆ ನೀಡಿದನು. ಅವರು ಯೇಸುವನ್ನು ದೇಹವನ್ನು ಆತನ ಶಿಷ್ಯರಲ್ಲಿ ಯಾರೂ ಕದಿಯದಂತೆ ಮತ್ತು ಅವನು ಪುನರುತ್ಥಾನ ಹೊಂದಿದ್ದಾನೆ ಎಂಬ ಹೇಳಿಕೆಯನ್ನು ನೀಡದಂತೆ ತಡೆಯಬೇಕೆಂದಿದ್ದರು (27:62-66).

## ಕ್ರಿಸ್ತನ ದೇಹವನ್ನು ಸಮಾಧಿಯಲ್ಲಿ ಇರಿಸಿದ್ದು (27:57-61)

**57ಸಂಜೆಯಾದಾಗ ಅರಿಮಥಾಯದ ಯೋಸೇಫನೆಂಬ ಒಬ್ಬ ಧನವಂತನು ಬಂದನು; ಇವನು ಸಹ ಯೇಸುವಿನ ಶಿಷ್ಯನಾಗಿದ್ದನು. 58ಇವನು ಪಿಲಾತನ ಬಳಿಗೆ ಹೋಗಿ ಯೇಸುವಿನ ದೇಹವನ್ನು ತನಗೆ ಕೊಡಿಸಬೇಕೆಂದು ಬೇಡಿಕೊಳ್ಳಲಾಗಿ ಪಿಲಾತನು ಅದನ್ನು ಕೊಡಬೇಕೆಂದು ಅಪ್ಪಣೆಮಾಡಿದನು. 59ಯೋಸೇಫನು ಆ ದೇಹವನ್ನು ತೆಗೆದುಕೊಂಡು ಅದನ್ನು ಶುದ್ಧವಾದ 60ನಾರುಮಡಿಯಲ್ಲಿ ಸುತ್ತಿ ಬಂಡೆಯಲ್ಲಿ ತೋಡಿದ್ದ ತನ್ನ ಹೊಸ ಸಮಾಧಿಯಲ್ಲಿ ಇಟ್ಟು ಸಮಾಧಿಯ ಬಾಗಲಿಗೆ ದೊಡ್ಡ ಕಲ್ಲನ್ನು ಉರುಳಿಸಿ ಹೋದನು. 61ಮಗ್ದಲದ ಮರಿಯಳೂ ಆ ಬೇರೆ ಮರಿಯಳೂ ಅಲ್ಲಿ ಸಮಾಧಿಗೆ ಎದುರಾಗಿ ಕೂತಿದ್ದರು.**

ಯೋಹಾನನ ಸುವಾರ್ತೆ ಹೀಗೆ ಸೂಚಿಸುತ್ತದೆ, ಸಬ್ಬತ್ ಸಮೀಪಿಸುತ್ತಿದ್ದರಿಂದ ಯೆಹೂದ್ಯ ನಾಯಕರು ಯೇಸುವಿನ ಮತ್ತು ಆತನೊಂದಿಗೆ ಕ್ರೂಜೆಗೆ ಹಾಕಲ್ಪಟ್ಟ ಆ ಇನ್ನಿಬ್ಬರ ಕಾಲುಗಳನ್ನು ಮುರಿದು ಅವರು ಬೇಗನೇ ಮರಣ ಹೊಂದುವಂತೆ ಮಾಡಲು ಅಪ್ಪಣೆಯನ್ನು ಕೇಳಿದರು (ಯೋಹಾನ 19:31). ಮುರಿದ ಕಾಲುಗಳಿಂದ ಅವರು ಉಸಿರಾಡಲು ಅಸಮರ್ಥರಾಗುತ್ತಿದ್ದರು ಮತ್ತು ಖಂಡಿತವಾಗಿಯೂ ಉಸಿರುಗಟ್ಟಿ ಸಾಯುತ್ತಿದ್ದರು. ಸೈನಿಕರು ಇಬ್ಬರು ಕಳ್ಳರ ಕಾಲುಗಳನ್ನು ಮುರಿದರು; ಮತ್ತು ಯೇಸು ಮರಣ ಹೊಂದಿದ್ದನ್ನು ಕಂಡುಕೊಂಡು ಅವರು ಆತನ ಕಾಲುಗಳನ್ನು ಮುರಿಯಲಿಲ್ಲ. ಇದು ಕೀರ್ತನೆ 34:20ರಲ್ಲಿರುವ ಪ್ರವಾದನೆಯನ್ನು ನೆರವೇರಿಸಿತು: "ಆತನ ಎಲುಬುಗಳಲ್ಲಿ ಒಂದಾದರೂ ಮುರಿದು ಹೋಗುವದಿಲ್ಲ" (ಯೋಹಾನ 19:36). ಒಬ್ಬ ಸೈನಿಕನು ಅವನು ಮರಣಹೊಂದಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳುವದಕ್ಕಾಗಿ ಆತನ ಪಕ್ಕೆಯನ್ನು ತಿವಿದನು, ತಕ್ಷಣ "ರಕ್ತ ಮತ್ತು ನೀರು ಹೊರಗೆ ಬಂತು" (ಯೋಹಾನ 19:34).

ಶುಕ್ರವಾರವಾಗಿದ್ದದರಿಂದ, ಅದು ಸಬ್ಬತ್ ದಿನಕ್ಕೆ "ಸಿದ್ಧತೆಯನ್ನು ಮಾಡಿಕೊಳ್ಳುವ ದಿನವಾಗಿತ್ತು." ಯೆಹೂದಿ ನಾಯಕರಿಗೆ ಶವವನ್ನು ರಾತ್ರಿಯೆಲ್ಲಾ ಕ್ರೂಜೆಯ ಮೇಲೆ ಇಡುವದು ಬೇಕಾಗಿರಲಿಲ್ಲ (ಯೋಹಾನ 19:31). ಧರ್ಮಶಾಸ್ತ್ರವು ಯಾರನ್ನಾದರೂ ಮರಕ್ಕೆ ನೇತುಹಾಕಿದರೆ ಸೂರ್ಯನು ಮುಳುಗುವದಕ್ಕಿಂತ ಮುಂಚಿತವಾಗಿ ಆತನನ್ನು ಇಳಿಸಿ ಸಮಾಧಿಮಾಡಬೇಕು ಎಂದು ಹೇಳುತ್ತದೆ (ಧರ್ಮೋಪದೇಶಕಾಂಡ 21:22, 23).

ಯೇಸು ಮಧ್ಯಾಹ್ನ 3.00 ಗಂಟೆಗೆ ಸತ್ತನು. ಸಬ್ಬತ್ತ್ ದಿನವು 6.00 ಗಂಟೆಗೆ ಸಬ್ಬತ್ ಪ್ರಾರಂಭವಾಗುವದರಿಂದ ಯೆಹೂದ್ಯರು ದೇಹಗಳನ್ನು ಕ್ರೂಜೆಗಳಿಂದ ಇಳಿಸಬೇಕೆಂದು ಪ್ರಯತ್ನಿಸುತ್ತಿದ್ದರು.[1]

"ಸಿದ್ಧತೆಯ ದಿನ" (*paraskeuē*) ಇದು "ಶುಕ್ರವಾರ" ಎಂಬ ಪದಕ್ಕೆ ತಾಂತ್ರಿಕ ಪದವಾಗಿದೆ, ಮತ್ತು ಇದನ್ನು ಆಧುನಿಕ ಗ್ರೀಕ್ ಭಾಷೆಯಲ್ಲಿ ಉಳಿಸಿಕೊಳ್ಳಲಾಗಿದೆ. ಸಬ್ಬತ್ತ್ ದಿನವು ಸಹ ಶ್ರೇಷ್ಟವಾದ ಪರಿಶುದ್ಧ ದಿನವಾಗಿದೆ, ಯಾಕೆಂದರೆ ಇದು ಪಸ್ಕಹಬ್ಬದ ಸಬ್ಬತ್ತ ದಿನವಾಗಿದೆ (ಯೋಹಾನ 19:31). ಅವರ ಅವಸರದಿಂದಾಗಿ, ಯೇಸುವಿನ ಶಿಷ್ಯರು ಯೇಸುವಿನ ಸಂಪ್ರದಾಯಿಕವಾಗಿ ಮಾಡುವಂತೆ ಯೇಸುವಿನ ದೇಹವನ್ನು ಸಮಾಧಿಯಲ್ಲಿಡುವದಕ್ಕಾಗಿ ಆತನ ದೇಹಕ್ಕೆ ಸರಿಯಾಗಿ ತೈಲಾಭಿಷೇಕವನ್ನು ಮಾಡಲಿಲ್ಲ. ಈ ಕಾರಣದಿಂದಾಗಿ ಸ್ತ್ರೀಯರು ಸಮಾಧಿಯ ಬಳಿಗೆ ಭಾನುವಾರ ಬೆಳಗಿನ ಜಾವದಲ್ಲಿ ಹೋಗು ತ್ತಿದ್ದಾರೆ (ಲೂಕ 23:55-24:1).

**ವಚನ 57. ಯೋಸೇಫನು** ಮೂಲತಃ ಯೂದಾಯದ **ಅರಿಮಥಾಯ**ದವನು ಎಂದು ಕರೆಯಲ್ಪಡುವ ಪಟ್ಟಣದವನು. ಇದು ರೋಮನ್ ರಾಮಾ (Ramathaim-zophim) ಗೆ ಸಮುವೇಲನ ಪಟ್ಟಣ (1 ಸಮುವೇಲ 1:1, 19, 20). ಇಂದು ಈ ಪಟ್ಟಣವನ್ನು "Rentis" ಎಂದು ಕರೆಯುತ್ತಿದ್ದರು.

ಯೋಸೇಫನು ಸನ್ಹೇದ್ರಿನ್ ಸಭೆಯ "ಪ್ರಾಮುಖ್ಯ ಸದಸ್ಯನಾಗಿದ್ದನು" (ಮಾರ್ಕ 15:43; ಲೂಕ 23:50), ಸಹಜವಾಗಿ ಅವನ ಮಾತುಗಳನ್ನು ಪರಿಗಣಿಸುತ್ತಿದ್ದರು ಮತ್ತು ಗೌರವಿಸುತ್ತಿದ್ದರು. ಆದಾಗ್ಯೂ, ಅವನು ಯೇಸುವಿನ ಕುರಿತಾಗಿ ಯೆಹೂದ್ಯರ ಕಾರ್ಯಗಳಿಗೆ ಸಮ್ಮತಿಯನ್ನು ನೀಡರಲಿಲ್ಲ (ಲೂಕ 23:51). ಈ **ಧನವಂತ** ಮನುಷ್ಯನು ದೇವರ ರಾಜ್ಯ ಕ್ಕಾಗಿ ಎದುರುನೋಡುವವನಾಗಿದ್ದನು (15:43). ಇಲ್ಲಿಯವರೆಗೆ, ಅವನು **ಯೇಸುವಿನ** ರಹಸ್ಯ **ಶಿಷ್ಯನಾಗಿದ್ದನು** (ಯೋಹಾನ 19:38; ನೋಡಿರಿ 12:42), ಆದರೆ ಈಗ ಆತನು ತನ್ನ ವಿಶ್ವಾಸವನ್ನು ಎಲ್ಲರಿಗೂ ತಿಳಿಯುವಂತೆ ಮಾಡಿದನು. ಆಸಕ್ತಿ ತರುವಂತ ಅಂಶವೆಂದರೆ, "ಯೇಸುವಿನ ಕ್ರೂಜೆಯ ಮರಣ ರಹಸ್ಯವಾಗಿದ್ದ ಆತನ ಅನೇಕ ಹಿಂಬಾಲಕರು ಯೋಸೇಫನ ಮೇಲೆ ವಿರೋಧಾನ್ಮಕ ಪರಿಣಾಮವನ್ನು ಬೀರಿದ್ದರಿಂದ ಅವನು ಬಹಿರಂದ ಪಡಿಸಿತು."[2]

**ವಚನ 58.** ಯೇಸುವನ್ನು ಕ್ರೂಜೆಗೆ ಹಾಕಿದ್ದರಿಂದ, ಆತನ ದೇಹವನ್ನು ಸಮಾಧಿಯಲ್ಲಿ ಇರಿಸಲು ರೋಮನ್ ಅಧಿಕಾರಿಗಳಿಂದ ಅಪ್ಪಣೆಯನ್ನು ಪಡಿಯುವದು ಅವಶ್ಯವಾಗಿತ್ತು. ಯೇಸುವಿನ ಕುಟುಂಬದವರು ಅಥವಾ ಆತನ ಶಿಷ್ಯರು ಆತನ ದೇಹವನ್ನು ಕೇಳಬಹುದೆಂದು ನಿರೀಕ್ಷಿಸಿದ್ದರು. ಹಾಗೂ, ಇದು ವಿಷಯವಾಗಿರಲಿಲ್ಲ.

ಮರೆಯಿಂದ ಹೊರಗೆ ಬಂದ ಯೋಸೇಫನು "ಧೈರ್ಯವನ್ನು ಒಟ್ಟುಗೂಡಿಸಿ" (ಮಾರ್ಕ 15:43) **ಪಿಲಾತನು ಯೇಸುವಿನ ದೇಹಕ್ಕಾಗಿ** ಕೇಳಿಕೊಂಡನು ಆದುದರಿಂದ ಆತನು ಶತಾಧಿಪತಿಯನ್ನು ಆತನು ಸತ್ತಿರುವದನ್ನು ಖಚಿತಪಡಿಸಿಕೊಳ್ಳಲು ಆಜ್ಞಾಪಿಸಿದನು (ಮಾರ್ಕ 15:44). ಯೇಸು ಸತ್ತಿದ್ದಾನೆ ಎಂಬುದು ಒಮ್ಮೆ ಅವನಿಗೆ ಮನದಟ್ಟಾಗುವಾಗ, ಅವನು ದೇಹವನ್ನು ಯೋಸೇಫನಿಗೆ ಕೊಟ್ಟನು (ಮಾರ್ಕ 15:45).

**ವಚನ 59. ಯೋಸೇಫನು** ಯೋಸೇಫನು ಕ್ರೂಜೆಯಿಂದ **ದೇಹವನ್ನು** ಕೆಳಗೆ ಇಳಿಸಿ ತೆಗೆದುಕೊಂಡ ಮೇಲೆ (ಮಾರ್ಕ 15:46; ಲೂಕ 23:53), **ಶುದ್ಧವಾದ ನಾರುಮಡಿಯಲ್ಲಿ ಅದನ್ನು ಸುತ್ತಿದರು,** ಬಹುಶಃ ಇದೊಂದೆ ಹೊರಗಿನ ಅಥವಾ ಶವವಸ್ತ್ರ ಆಗಿರಬಹುದು. ಯೋಹಾನನು ಯೇಸುವಿನ ಹೂಣಿಡುವಿಕೆಯ ವಿಧಾನದ ಕುರಿತು ವಿಶೇಷವಾದ ವಿವರಣೆಯನ್ನು ನೀಡುತ್ತಾನೆ ಆತನ ದೇಹವನ್ನು "ನಾರುಮಡಿ ಮತ್ತು ಸುಗಂಧ ದ್ರವ್ಯಗಳಲ್ಲಿ" ಕಟ್ಟಿದರು ಇದು "ಯೆಹೂದ್ಯರ ಹೂಣಿಡುವಿಕೆಯ ಸಂಪ್ರದಾಯಕ್ಕೆ" ಸಾಮರಸ್ಯವನ್ನು ಹೊಂದಿದೆ (ಯೋಹಾನ 19:40). ಬಟ್ಟೆಯ ತುಂಡುಗಳನ್ನು ಮುಲಾಮಿನಲ್ಲಿ ಅದ್ದಿ, ಯೆಹೂದ್ಯರು ಸತ್ತವರನ್ನು ಹೆಚ್ಚಾಗಿ

ಐಗುಪ್ತರಂತೆ ದೇಹವು ಸಂಪೂರ್ಣವಾಗಿ ಮುಚ್ಚಲ್ಪಡುವವರೆಗೆ ಮಾಡುತ್ತಿದ್ದರು.[3] ಲಾಜರನು ತನ್ನ ಸಮಾಧಿಯಿಂದ ಹೊರಗೆ ಬರುವಾಗ "ಅವನ ಕೈಕೈಲುಗಳು ಬಟ್ಟೆಯಿಂದ ಕಟ್ಟಲ್ಪಟ್ಟಿದ್ದವು, ಅವನು ಮುಖವು ಬಟ್ಟೆಯಿಂದ ಸುತ್ತಲ್ಪಟ್ಟಿತು" (ಯೋಹಾನ 11:44).

ಯೋಸೇಫನು ಯೇಸುವನ್ನು ತನ್ನಷ್ಟಕ್ಕೆ ತಾನೇ ಹೂಣಿಡಲಿಲ್ಲ. ಅವನೊಟ್ಟಿಗೆ ನಿಕೋದೇಮನು ಇದ್ದನು, ಯೆಹೂದ್ಯರ ಇನ್ನೊಬ್ಬ ಅಧಿಕಾರಿ, ಯೇಸುವಿನ ಬಳಿಗೆ ರಾತ್ರಿಯ ವೇಳೆಯಲ್ಲಿ ಬಂದಂತ ವ್ಯಕ್ತಿ (ಯೋಹಾನ 3:1-21). ಯೋಹಾನ 7:50, 51ರ ಪ್ರಕಾರ, ಸನ್ಹೇದ್ರಿನ್ ಸಭೆಯ ಸದಸ್ಯನಾಗಿ, ಯೇಸುವಿಗೆ ನ್ಯಾಯಯುತವಾದ ವಿಚಾರಣೆ ನಡೆಯಲೆಂದು ಸಮರ್ಥಿಸಿಕೊಂಡಿದ್ದನು. ಆ ಸಮಯದಲ್ಲಿ ಆತನನ್ನು ಕ್ರಿಸ್ತನ ಶಿಷ್ಯನೆಂದು ದೂರವಾಗಿತ್ತು. ಅವನು ರಹಸ್ಯ ಶಿಷ್ಯರಲ್ಲಿ ಒಬ್ಬನಾಗಿದ್ದನು, ಆದರೆ ಅವನಿಗೆ ತನ್ನ ಶಿಷ್ಯತ್ವವನ್ನು ಇನ್ನು ಮುಂದೆ ರಹಸ್ಯವಾಗಿ ಇಟ್ಟುಕೊಳ್ಳುವದು ಸಾಧ್ಯವಾಗಲಿಲ್ಲ. ಅವನು ಯೇಸುವನ್ನು ಹೂಣಿಡುವದಕ್ಕೆ ಒಂದು ಬೆಲೆಬಾಳುವ ಮುಲಾಮನ್ನು ಒದಗಿಸಿದನು; ಸುಮಾರು ಒಂದುನೂರು ಪೌಂಡ್ಸ್‌ನಷ್ಟು ರಕ್ತಬೋಳ ಮತ್ತು ಅಗುಳಗಳನ್ನು ಕಲಸಿದ ಚೂರ್ಣ ಅದಾಗಿತ್ತು (ಯೋಹಾನ 9:39).

**ವಚನ 60.** ಯೇಸುವಿನ ದೇಹವನ್ನು ಸಿದ್ಧಗೊಳಿಸಿದ ನಂತರ, ಯೋಸೇಫನು ಅದನ್ನು **ತನ್ನ ಹೊಸ ಸಮಾಧಿಯಲ್ಲಿ ಇಟನು.** ಅವನು ಅದನ್ನು ಬಂಡೆಯಲ್ಲಿ ನಿರ್ಮಿಸಿದ್ದನು. ಈ ನಿಜಾಂಶವು ಎಲ್ಲಾ ರೀತಿಯಿಂದ ಆಶ್ಚರ್ಯವನ್ನು ಉಂಟುಮಾಡುವಂತದ್ದಾಗಿತ್ತು. (1) ಯೋಸೇಫನ ಈ ಕರುಣೆಯ ಕಾರ್ಯ ನಿಜವಾಗಿ ದೊಡ್ಡ ಬಲಿದಾನವಾಗಿತ್ತು. ಅವನು ತನಗಾಗಿರುವದನ್ನು ಕೊಟ್ಟುಬಿಟ್ಟಿದ್ದನು. ಯೇಸುವನ್ನು ಅಪರಾಧಿಯೆಂದು ನಿರ್ಧರಿಸಿದ ನಂತರವು, ಯೆಹೂದ್ಯರು ಯಾರನ್ನೂ ತಮ್ಮೊಂದಿಗೆ ಅದೇ ಸಮಾಧಿಯಲ್ಲಿ ಹೂಣಿಡುವದಕ್ಕೆ ಅನುಮತಿಸುವದಿಲ್ಲ. ಬಹುಶಃ ಯೋಸೇಫನು ಇನ್ನೊಂದು ಸಮಾಧಿಯನ್ನು ಕೊಂಡುಕೊಳ್ಳಬೇಕಾಯಿತು. (2) ಅಪರಾದಿಗಳೆಂದು ನಿರ್ಣಯಿಸಲ್ಪಟ್ಟ ಕೈದಿಗಳಿಗೆ ಸಾಂಪ್ರದಾಯಿಕವಾಗಿ ಉಪಯೋಗಿಸದೇ ಇರುವ ಸಮಾಧಿಯಲ್ಲಿ ಗೌರವಪೂರ್ವಕವಾದ ಶವಸಂಸ್ಕಾರ ದೊರೆಯುವದಿಲ್ಲ (ಯೋಹಾನ 19:41).[4] ಆಗತಾನೇ ಕ್ರೂಜೆಯ ಮರಣವನ್ನು ಹೊಂದಿದವನಿಗೆ ಸನ್ಹೇದ್ರಿನ್ ಸಭೆಗೆ ಸಂಬಂಧಪಟ್ಟವನ ಸಮಾಧಿಯಲ್ಲಿ ಹೂಣಿಡುವದು ಅತೀವವಾದ ಗೌರವ ತಂತುವಂಥದ್ದಾಗಿತ್ತು. (3) ಯೇಸುವನ್ನು ಹೂಣಿಟ್ಟದ್ದು ಪ್ರವಾದನೆಯ ನೆರವೇರಿಕೆಯಾಗಿತ್ತು. ಈ ಸಮಾದಿ "ಬಂಡೆಯನ್ನು ಸೀಳಿ ನಿರ್ಮಿಸಿದ್ದಾಗಿತ್ತು" - ಸ್ವಾಭಾವಿಕ ಗವಿಗಳಿಗೆ ವಿರುದ್ಧವಾಗಿ - ಇದು "ಶ್ರೀಮಂತ ಮನುಷ್ಯನಿಗೆ" ಸಮಾಧಿಗೆ ತಗುಲಿದ ವೆಚ್ಚವನ್ನು ಸೂಚಿಸುತ್ತದೆ (27:57). ಶ್ರಮೆಯ ಸೇವಕನ ಕುರಿತು ಯೆಶಾಯನು ಹೀಗೆ ಪ್ರವಾದಿಸುತ್ತಾನೆ, "ಅವನು ಸತ್ತಾಗ ದುಷ್ಟರ ಮಧ್ಯ ಪುಷ್ಟರ ನಡುವೆ ಹೂಣಿಟ್ಟರು" (ಯೆಶಾಯ 53:9).

ಯೇಸುವಿನ ದೇಹವನ್ನು ಒಮ್ಮೆ ಸಮಾದಿಯಲ್ಲಿ ಸುರಕ್ಷಿತವಾಗಿ ಇಟ್ಟ ನಂತರ ಯೋಸೇಫನು **ಸಮಾಧಿಯ ಬಾಗಲಿಗೆ ದೊಡ್ಡ ಕಲ್ಲನ್ನು ಉರುಳಿಸಿ ಹೋದನು.** ಆ ಸಮಯದಲ್ಲಿದ್ದ ಕೆಲವು ಸಮಾಧಿಗಳಂತೆ ಈ ಸಮಾಧಿಗೆ ಕಲ್ಲನ್ನು ಉರುಳಿಸಲು ಮಾರ್ಗ ಮಾಡಿರಬಹುದು.[5] ಬಂಡೆಯು ತಾನೇ ವಿಶಾಲ ಮತ್ತು ಭಾರವಾಗಿರುವಾಗ ಯೇಸುವಿನ ದೇಹಕ್ಕೆ ತೈಲವನ್ನು ಹಚ್ಚಲು ಪುನರುತ್ಥಾನ ದಿನದ ಬೆಳಗಿನ ಜಾವದಲ್ಲಿದ್ದ ಸ್ತ್ರೀಯರು ಅದನ್ನು ನಮಗಾಗಿ ಉರುಳಿಸುವವರು ಯಾರು ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು (ಮಾರ್ಕ 16:3, 4). ಇಂಥಹ ಬಂಡೆ ಸಮಾಧಿ ಕಳ್ಳರಿಗೆ ಅಡ್ಡಿಯಾಗುತಿತ್ತು; ಅದಕ್ಕೂ ಹೆಚ್ಚಾಗಿ ಕ್ರೂರಮೃಗಗಳು ಸತ್ತ ದೇಹವನ್ನು ತಿನ್ನುವದನ್ನು ತಡೆಗಟ್ಟುತಿತ್ತು. ಯೇಸುವಿನ ಸಮಾಧಿಗೆ ಚಿಕ್ಕ ಪ್ರವೇಶದ್ವಾರವಿತ್ತು, ಅದು ಖಾಲಿಯಾಗಿರುವಾಗ ಪೇತ್ರ ಮತ್ತು ಯೋಹಾನರು ಒಳಗೆ ನೋಡುವದಕ್ಕಾಗಿ ಬೋಗ್ಗಿ ಹೋಗಬೇಕಾಯಿತು (ಯೋಹಾನ 20:5). ಇದು ಸಮಾಧಿಗಳನ್ನು ಆ ಸಮಯದಲ್ಲಿ ಕಟ್ಟುವ ವಿಧಾನದೊಂದಿಗೆ ಅನುಗುಣವಾಗಿತ್ತು.

ಯೇಸುವಿನ ಸಮಾಧಿಯು ಕ್ರೂಜೆಯ ಮರಣವು ಸಂಭವಿಸಿದ ಕ್ಷೇತ್ರದಲ್ಲಿರುವ ಒಂದು

ತೋಟದಲ್ಲಿತ್ತು (ಯೋಹಾನ 19:41). ಯೆರೂಸಲೇಮಿಗೆ ಹೋಗುವ ಯಾತ್ರಿಕರಿಗೆ ಎರಡು ಸಾಂಪ್ರದಾಯಿಕ ಸಮಾಧಿಗಳನ್ನು ತೋರಿಸುತ್ತಾರೆ (ನೋಡಿರಿ ವ್ಯಾಖ್ಯಾನಗಳು 27:33). ಮೊದಲನೆಯದು ಗೊಲ್ಗಥಾದೊಂದಿಗೆ ಪರಿಶುದ್ಧ ಶವಮಂದಿರದ ದೇವಾಲಯದ ಒಳಗೆ ನಿರ್ಮಿಸಲಾಗಿದೆ. ಈ ಸಮಾಧಿಯ ಹಿಂದಿರುವ ಸಂಪ್ರದಾಯ - ಅದರ ಮೂಲ ಸ್ಥಿತಿಯಲ್ಲಿ ಕಾಯ್ದಿರಿಸಿಲ್ಲ - ಕೊನಸ್ಟಟಾಯಿನ್ ಮತ್ತು ಆತನ ತಾಯಿ ಹೆಲಿನಾಳ ಕಾಲಕ್ಕೆ ಹಿಂತಿರುಗುತ್ತದೆ (ನಾಲ್ಕನೆ ಶತಮಾನದಲ್ಲಿ). ಕೆಲವರು ಇದು ನಿಜವಾಗಿ ಯೇಸುವಿನ ಸಮಾಧಿ ಎಂದು ನಂಬುತ್ತಿದ್ದರು.

ಎರಡನೆಯದಾಗಿ ತೋಟದ ಸಮಾಧಿ, ಇದು ಗಾರ್ಡನ್ ಕಲ್ವಾರಿಯಿಂದ ಬಹಳ ದೂರವಿಲ್ಲ. ಈ ಸಂಪ್ರದಾಯ, ಹಾಗೂ, ಹತ್ತೊಂಬತ್ತನೇ ಶತಮಾನದ ಹಿಂದೆ ಹೋಗುತ್ತದೆ. ಸಮಾಧಿಗೆ ಕಲ್ಲನ್ನು ಉರುಳಿಸುವ ಮಾರ್ಗಸಹ ಇದೆ. ಯೇಸುವಿನ ಸಮಾಧಿಗೆ ನಿಜವಾಗಿಯೂ ಇದ್ದಂತೆ ಆದರೆ ಇತರ ಗುಣ ಲಕ್ಷಣಗಳು ವಾಸ್ತು ಶಾಸ್ತ್ರಜ್ಞರನ್ನು ಸಮಾಧಿಯ ದಿನಾಂಕವನ್ನು ಕ್ರಿ.ಪೂ. ಎಂಟನೇ ಮತ್ತು ಏಳನೇ ಶತಮಾನಕ್ಕೆ ಕೊಂಡುಯ್ಯುತ್ತದೆ. ಈ ಸಮಾಧಿಯಲ್ಲಿ ಯೇಸುವನ್ನು ಹೂಣಿಟ್ಟರು ಎಂಬುದು ಬಹಳಷ್ಟು ಸಂದೇಶಕ್ಕೆ ಎಡೆಮಾಡಿಕೊಡುತ್ತದೆ.

**ವಚನ 61. ಮಗ್ದಲದ ಮರಿಯಳೂ ಆ ಬೇರೆ ಮರಿಯಳೂ** (ಯಾಕೋಬ ಮತ್ತು ಯೋಹಾನರ ತಾಯಿ) ಯೋಸೆಫ ಮತ್ತು ನಿಕೋದೇಮನ ಹಿಂದೆ ಸಮಾಧಿಯವರೆಗೆ ಹೋದರು. ಲೂಕನ ಸಾಮಾನ್ಯ ಉಲ್ಲೇಖ "ಗಲಿಲಾಯದಿಂದ ಆತನೊಟ್ಟಿಗೆ ಬಂದ ಸ್ತ್ರೀಯರು" ಎಂಬುದಾಗಿದೆ (ಲೂಕ 23:55). ಇದು ಸಲೋಮಿ ಸಹ ಅಲ್ಲಿದ್ದಳು ಎಂಬುದನ್ನು ಸೂಚಿಸುತ್ತದೆ (ನೋಡಿರಿ ವ್ಯಾಖ್ಯಾನ 27:56). ಈ ಸ್ತ್ರೀಯರು **ಸಮಾಧಿಯ ಎದುರಿನಲ್ಲಿ ಕುಳಿತುಕೊಂಡಿದ್ದರು.** ಹೂಣಿಡುವದನ್ನು ವೀಕ್ಷಿಸಿದ ನಂತರ, ಹಬ್ಬದ ಸಂದರ್ಭದಲ್ಲಿ ತಾವು ವಾಸಿಸುತ್ತಿದ್ದ ಸ್ಥಳಕ್ಕೆ ಹಿಂತಿರುಗಿದರು. ಸಬ್ಬತ್ತ ದಿನವು ಕಳೆದ ನಂತರ, ಅವರು, ಯೇಸುವಿನ ದೇಹಕ್ಕೆ ಹಚ್ಚಲು ಸುಗಂಧ ದ್ರವ್ಯಗಳನ್ನು ಸಿದ್ಧಪಡಿಸಿದರು (ಮಾರ್ಕ 16:1; ಲೂಕ 23:56).

## ಪಿಲಾತನಿಂದ ತಡೆಗಟ್ಟುವ ಅಪ್ಪಣೆ (27:62-66)

**62ಮರುದಿನ ಅಂದರೆ ಸೌರಣೆಯ ದಿನ ಕಳೆದ ಮೇಲೆ ಮಹಾಯಾಜಕರೂ ಫರಿಸಾಯರೂ ಪಿಲಾತನ ಬಳಿಗೆ 63ಕೂಡಿಬಂದು - ದೊರೆಯೇ, ಆ ಮೋಸಗಾರನು ಬದುಕಿದ್ದಾಗ ತಾನು ಮೂರು ದಿನದ ಮೇಲೆ ಏಳುತ್ತೇನೆ ಅಂತ ಹೇಳಿದ್ದು ನಮ್ಮ ನೆನಪಿಗೆ ಬಂತು; 64ಆದಕಾರಣ ಮೂರನೆಯ ದಿನದ ತನಕ ಸಮಾಧಿಯನ್ನು ಭದ್ರಮಾಡಿ ಕಾಯುವದಕ್ಕೆ ಅಪ್ಪಣೆಕೊಡಬೇಕು; ಇಲ್ಲದಿದ್ದರೆ ಅವನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ ಸತ್ತವನು ಬದುಕಿ ಬಂದಿದ್ದಾನೆ ಎಂದು ಹೇಳಾರು; ಆಗ ಮೊದಲನೆಯ ಮೋಸಕ್ಕಿಂತ ಕಡೆಯ ಮೋಸವು ಕೆಡುಕಾದೀತು ಅಂದರು. 65ಪಿಲಾತನು ಅವರಿಗೆ - ಕಾವಲುಗಾರರನ್ನು ತಕ್ಕೊಳ್ಳಿ; ಹೋಗಿ ನಿಮಗೆ ತಿಳಿದ ಹಾಗೆ ಭದ್ರಮಾಡಿ ಕಾಯಿರಿ ಎಂದು ಹೇಳಲಾಗಿ ಅವರು ಹೊರಟು 66ಕಾವಲುಗಾರರೊಂದಿಗೆ ಆ ಕಲ್ಲಿಗೆ ಮುದ್ರೆಹಾಕಿ ಸಮಾಧಿಯನ್ನು ಭದ್ರಮಾಡಿದರು.**

**ವಚನಗಳು 62, 63. ಸೌರಣೆಯ ದಿನದ** ನಂತರ ಸಬ್ಬತ್ತ ದಿನವಾಗಿತ್ತು ಅಥವಾ ಶನಿವಾರವಾಗಿತ್ತು. ಈ ಸಂದರ್ಭದಲ್ಲಿ, ಮಹಾಯಾಜಕರು ಮತ್ತು ಫರಿಸಾಯರೂ ಪಿಲಾತನನ್ನು ಬೇಟಿಯಾಗಿ ದೊರೆಯೇ, **ಆ ಮೋಸಗಾರನು ಬದುಕಿದ್ದಾಗ ತಾನು ಮೂರು ದಿನದ ಮೇಲೆ ಏಳುತ್ತೇನೆ ಅಂತ ಹೇಳಿದ್ದು ನಮ್ಮ ನೆನಪಿಗೆ ಬಂತು** ಎಂದು ಹೇಳುತ್ತಾರೆ. ಯೇಸು ವೈಯಕ್ತಿಕವಾಗಿ ತನ್ನ ಸ್ವಂತ ಶಿಷ್ಯರಿಗೆ "ತನ್ನ ಶ್ರಮೆ ಮತ್ತು ಮರಣದ ತರುವಾಯ ತಾನು ಮೂರನೇ ದಿನದಲ್ಲಿ ಎದ್ದುಬರುವದಾಗಿ ಹೇಳಿದನು" (16:21; 17:9, 22, 23; 20:18, 19).

ಇನ್ನಿತರ ಸಮಯದಲ್ಲಿ ಆತನು ಯೆಹೂದಿ ನಾಯಕರಿಗೆ ಮತ್ತು ಜನರಿಗೆ ಇಂಥಹದ್ದೇ ಹೇಳಿಕೆಯನ್ನು ನೀಡಿದ್ದನು. ಶಾಸ್ತ್ರಿಗಳು ಫರಿಸಾಯರೂ ಆತನಿಗೆ ಸೂಚಕಕಾರ್ಯಗಳನ್ನು ಕೇಳಿದಾಗ, ಅವರಿಗೆ ಯೋನನ ಸೂಚಕಕಾರ್ಯವೇ ಹೊರತು ಬೇರಾವ ಸೂಚಕ ಕಾರ್ಯವು ದೊರೆಯುವದಿಲ್ಲ ಎಂದು ಹೇಳಿದ್ದನು. ಯೋನನು ಸಮುದ್ರ ಜೀವಿಯ ಹೊಟ್ಟೆಯಲ್ಲಿ ಮೂರು ಹಗಲು ಮೂರು ರಾತ್ರಿಗಳಿದ್ದಂತೆ ಯೇಸುವು ಸಹ ಅಷ್ಟೇ ದೀರ್ಘವಾದ ಸಮಯದ ವರೆಗೆ ಭೂಗರ್ಭದಲ್ಲಿ ಇರುತ್ತಾನೆ ಎಂದು ಹೇಳಿದನು (12:40). ತನ್ನ ದೇಹದ ಕುರಿತಾಗಿ ಮಾತಾಡುತ್ತಾ, "ಈ ದೇವಾಲಯವನ್ನು ಕೆಡವಿರಿ; ನಾನು ಇದನ್ನು ಮೂರು ದಿನಗಳಲ್ಲಿ ಎಬ್ಬಿಸುತ್ತೇನೆ" ಎಂದು ಹೇಳುತ್ತಾನೆ (ಯೋಹಾನ 2:19). ಅವರು ಈ ಹೇಳಿಕೆಯ ಅರ್ಥವನ್ನು ತಿಳಿದುಕೊಂಡಿಲ್ಲ ಎಂದು ಮೊದಲು ನಟಿಸಿದರೂ (26:61; 27:40), ಈ ಸಮಯದಲ್ಲಿ ಅವರು ಆತನು ತನ್ನ ದೇಹದ ಕುರಿತಾಗಿ ಮಾತನಾಡುತ್ತಿದ್ದಾನೆ ಮತ್ತು ತಾನು ಸತ್ತವರೊಳಗಿಂದ ಎದ್ದುಬರುವವರ ಕುರಿತಾಗಿ ಮಾತನಾಡುತ್ತಿದ್ದಾನೆ ಎಂಬುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡರು.

**ವಚನ 64.** ಈ ಪ್ರವಾದನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಪಿಲಾತನಿಗೆ ಮೂರು ದಿನಗಳ ವರೆಗೆ ಸಮಾಧಿಗೆ ಕಾವಲುಗಾರರನ್ನು ನೇಮಿಸಬೇಕೆಂದು ಕೇಳಿಕೊಂಡರು, ಆತನ ಶಿಷ್ಯರು ಆತನ ದೇಹವನ್ನು ಕದ್ದುಕೊಳ್ಳದಂತೆ ಮತ್ತು ನಂತರ ಆತನು ಪುನರುತ್ಥಾನ ಹೊಂದಿದ್ದಾನೆ ಎಂದು ವರದಿ ಮಾಡುವದನ್ನು ತಡೆಹಿಡಿಯುವದಕ್ಕಾಗಿ ಹೀಗೆ ಮಾಡಿದರು. ಅವರು **ಮೊದಲನೆಯ ಮೋಸಕ್ಕಿಂತ ಕಡೆಯ ಮೋಸವು ಕೆಡುಕಾದೀತು** ಎಂದು ಹೇಳಿ ಮುಕ್ತಾಯಮಾಡಿದರು. ಅವರ ವಿಚಾರದಲ್ಲಿ ಮೊದಲನೆಯ ಮೋಸವು ಯೇಸು ತಾನು ಮೆಸ್ಸೀಯನೆಂದು ಹೇಳಿಕೊಂಡದ್ದು, ಎರಡನೆಯ ಮೋಸವು ಅವನು ಪುನರುತ್ಥಾನ ಹೊಂದುವನೆಂದು ಹೇಳಿದ್ದು.[6] ಮಹಾಯಾಜಕರು ಸದ್ದುಕಾಯರಿಂದ ಬಂದವರಾಗಿದ್ದರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಮತ್ತು ಈ ಯೆಹೂದ್ಯರು ಪುನರುತ್ಥಾನದಲ್ಲಿ ನಂಬಿಕೆಯಿಡುತ್ತಿರಲಿಲ್ಲ (22:23; ಅಪೊಸ್ತಲರ ಕೃತ್ಯಗಳು 23:8).

ಯೆಹೂದ್ಯ ನಾಯಕರ ಪ್ರಾಮುಖ್ಯವಾದ ಕಳಕಳಿ ಅನಾವಶ್ಯಕನಾಗಿತ್ತು, ಶಿಷ್ಯರು ಯೇಸು ಪುನರುತ್ಥಾನ ಹೊಂದುತ್ತಾನೆ ಎಂಬುದನ್ನು ನಂಬದೇ ಹೋದದ್ದರಿಂದ (ನೋಡಿರಿ ಮಾರ್ಕ 9:10, 32; ಯೋಹಾನ 20:9). ಮಗ್ದಲದ ಮರಿಯಳು ಆತನು ಎದ್ದಿದ್ದಾನೆ ಎಂದು ವರದಿಮಾಡಿದ ನಂತರವೂ ಅವರು ನಂಬಲಿಲ್ಲ (ಮಾರ್ಕ 16:11, 14). ಯೇಸುವಿನ ಪುನರುತ್ಥಾನದ ವರದಿ ಅವರ ಬೋಧನೆಗಿಂತ ಅವರ ಅಧಿಕಾರಕ್ಕೆ ಅವರ ವರದಿ ಸತ್ಯವಾಗಿಲ್ಲದೇ ಹೋಗಿದ್ದರು ದೊಡ್ಡ ಬೆದರಿಕೆಯನ್ನು ನೀಡುವಂಥದ್ದಾಗಿತ್ತು.

**ವಚನ 65. ಪಿಲಾತನು** ಅವರ ಆಸೆಗೆ ಸಮ್ಮತಿಸಿದನು ಮತ್ತು **ಕಾವಲುಗಾರರನ್ನು** ಸಮಾಧಿಯ ಬಳಿಯಲ್ಲಿ ನೇಮಿಸಿದನು. ಈ ಮನುಷ್ಯರು ರೋಮನ್ ಸೈನಿಕರಾಗಿದ್ದರು ಮತ್ತು ಯೆಹೂದ್ಯರ ದೇವಾಲಯದ ಕಾವಲುಗಾರರಾಗಿರಲಿಲ್ಲ. ಇದು ಯೆಹೂದಿ ನಾಯಕರು ಪಿಲಾತನಿಂದ ಕೇಳಿ ಪಡೆದಿರುವದು ಅಲ್ಲದೆ ನಂತರ 28:11-15ರಲ್ಲಿರುವ ಟಿಪ್ಪಣಿಯು ಇದಕ್ಕೆ ಸಾಕ್ಷಿಯಾಗಿದೆ. "ಕಾವಲುಗಾರರು" (*koustōdia*) ಎಂದು ಅನುವಾದಿಸಲ್ಪಟ್ಟ ಗ್ರೀಕ್ ಪದ ನಿಜವಾಗಿಯು ಲ್ಯಾಟೀನ್ *custodia* ಪದದ ಅನುವಾದವಾಗಿದೆ. ಇದರ ಇಂಗ್ಲೀಷ್ ಪದ "ಕಾವಲು" ಮತ್ತು "ಕಾವಲುಗಾರ" ಎಂಬ ಪದದಿಂದ ತೆಗೆದುಕೊಳ್ಳಲಾಗಿದೆ.

**ವಚನ 66.** ಮಹಾಯಾಜಕರು ಮತ್ತು ಫರಿಸಾಯರು, ಪಿಲಾತನು ಅವರಿಗೆ ಸೂಚಿಸಿದಂತೆ **ಆ ಕಲ್ಲಿಗೆ ಮುದ್ರೆಹಾಕಿ ಸಮಾಧಿಯನ್ನು ಭದ್ರಮಾಡಿದರು** ಎಂದು ಹೇಳಲಾಗಿದೆ. ಅವರು ರೋಮನ್ ಕಾವಲುಗಾರರನ್ನು ಸಮಾಧಿಯ ಹೊರಗೆ ಕಾಯಲು ನೇಮಿಸಿದರು ಮತ್ತು ಬಂಡೆಯ ಮೇಲೆ ಮುದ್ರೆ ಹಾಕಿದರು. ಬಹುಶಃ ಅದು ದಾರ ಅಥವಾ ಹಗ್ಗದಿಂದ ಕೂಡಿದ್ದಾಗಿರಬಹುದು ಅದನ್ನು ಬಂಡೆಯ ಸುತ್ತಲು ಸುತ್ತಿ ಸಮಾಧಿಯ ಎರಡು ಬದಿಗಳಿಂದ

ತೆಗೆದುಕೊಂಡು ಪ್ರವೇಶದ್ವಾರದ ಬಳಿ ಸೇರಿಸಿರಬಹುದು. ಮೇಣ ಅಥವಾ ಜೇಡಿಮಣ್ಣನ್ನು ಹಗ್ಗದ ಮೇಲೆ ಹಚ್ಚಿರಬಹುದು, ನಂತರ ಅದರ ಮೇಲೆ ಮುದ್ರೆ ಉಂಗುರದಿಂದ ಒತ್ತಿರಬಹುದು ಇದರ ಮೇಲೆ ಅಧಿಕೃತವಾದ ರೋಮನ್ ಮುದ್ರೆ ಇರುತ್ತದೆ. ಯಾರಾದರು ಸಮಾಧಿಗೆ ಕೈ ಹಾಕಿದರೆ ಅವರಿಗೆ ಮರಣ ದಂಡನೆಯ ಬೆದರಿಕೆಯನ್ನು ಈ ಮುದ್ರೆ ನೀಡುತ್ತದೆ.

ಪಿಲಾತನು ಮತ್ತು ಯೆಹೂದ್ಯರು ಯಾವ ಕಾವಲುಗಾರರೂ, ಯಾವ ಸಮಾಧಿಯ ಸುರಕ್ಷಿತತೆಯೂ ಯೇಸುವಿನ ದೇಹ ಪುನರುತ್ಥಾನ ಹೊಂದುವದನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂಬುದನ್ನು ಅರಿತುಕೊಳ್ಳಲಿಲ್ಲ. ಬದಲಾಗಿ ಸುಳ್ಳು ಸುದ್ದಿಗಳನ್ನು ಹರಡುವದನ್ನು ತಡೆಗಟ್ಟಲು ಪ್ರಯತ್ನಿಸಿದರು, ಅವರು ಉದ್ದೇಶಿಸಿದಂತೆ, ಸಮಾಧಿಯ ಸುರಕ್ಷಿತತೆ, ಪುನರುತ್ಥಾನ ಅಧಿಕೃತವಾಗಿದೆ ಎಂಬ ಸತ್ಯವನ್ನು ದೃಢಪಡಿಸುವದಕ್ಕೆ ಸಹಾಯವಾಯಿತು.

---

ಟಿಪ್ಪಣಿಗಳು

[1]ನೋಡಿರಿ Josephus *Wars* 4.5.2; Mishnah *Shabbath* 23.4–5. [2]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 728. [3]Tacitus *Histories* 5.5. [4]As R. T. Franceರವರು ಟಿಪ್ಪಣಿಯಂತೆ, "ಇಲ್ಲಿಯವರೆಗೆ ಯಾರೊಬ್ಬರು ಉಪಯೋಗಿಸದೆ ಇರುವ ಸಮಾದಿ ಇತ್ತಿಚಿಗೆ ಸಂಪೂರ್ಣಗೊಂಡಿರುವ ಹೊಸ ಸಮಾಧಿ ಅಲ್ಲ, "*i.e.* ಕಲ್ಲಿನಲ್ಲಿರುವ ಗೂಡಿನೊಂದಿಗೆ ಸಾದಿನಮಾಡಿಕೊಳ್ಳಲು ಆಗುವದಿಲ್ಲ" (R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 403; ನೋಡಿರಿ comments on 8:21; 26:3). [5]ಸಮಾಧಿಗಳ ಕಲ್ಲನ್ನು ಉರುಳಿಸಿರುವದಕ್ಕೆ ಹೆಚ್ಚಿನ ಮಾಹಿತಿಗಾಗಿ, ನೋಡಿರಿ Mark Strauss, "Luke," in *Zondervan Illustrated Bible Backgrounds Commentary,* vol. 1, *Matthew, Mark, Luke* (Grand Rapids, Mich.: Zondervan, 2002), 496. [6]"ಮೊದಲನೆ ಮೋಸಕ್ಕಿಂತ ಕಡೆಯ ಮೋಸವು ಕೆಡುಕಾದೀತು" ಭಾಷಾ ಪ್ರಕಾರ ಹೇಳುವಂಥದ್ದಾಗಿದೆ (ನೋಡಿರಿ 12:45; 2 ಪೇತ್ರ 2:20).